www.ecourtsindia.com

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

PCR.ನಂ. 79-2023 ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ರಂಗೇಗೌಡ ಎಸ್.ಎನ್
ತಂದೆಯ ಹೆಸರು :- ನರಸಿಂಹಯ್ಯ
ವಯಸ್ಸು :- 38 ವರ್ಷ
ಉದ್ಯೋಗ :- ಖಾಸಗಿ ಕೆಲಸ
ವಾಸ :- ಸಿಂಗಟಿಹಳ್ಳಿ ಗ್ರಾಮ

**ಸಾಕ್ಷಿಗೆ ದಿಃ 26.12.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಶ್ರೀ ಎಂ.ಜಿ. ವಕೀಲರಿಂದ.**

ಈ ಕೇಸಿನ ದೂರುದಾರರು ನನ್ನ ತಂಗಿ ಆಗಬೇಕು. 24.03.2011 ರಲ್ಲಿ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಮಲ್ಲನಾಯಕನಹಳ್ಳಿಯ ಶ್ರೀನಿವಾಸ ಎನ್ನುವವರಿಗೆ ನನ್ನ ತಂಗಿಯನ್ನು ಕೊಟ್ಟು ಮದುವೆ ಮಾಡಿಕೊಟ್ಟಿರುತ್ತೇವೆ. ಮದುವೆ ಸಮಯದಲ್ಲಿ ಹಣ ಮತ್ತು ಒಡವೆಗಳನ್ನು ನೀಡಿರುತ್ತೇವೆ. ನಂತರ ನನ್ನ ತಂಗಿ ಅವರ ಮನೆಯಲ್ಲಿಯೇ ವಾಸ ಮಾಡುತ್ತಿದ್ದು ಅವರು ಗರ್ಬಿಣಿ ಆದ ನಂತರ ನಮ್ಮ ಮನೆಗೆ ಹೆರಿಗೆಗಾಗಿ ಬಂದಿರುತ್ತಾರೆ. ನಂತರ ಅವರ ಹೆರಿಗೆ ಬಳಿಕ 9 ತಿಂಗಳು ನಮ್ಮ ಮನೆಯಲ್ಲಿದು ನಂತರ ಅವರನ್ನು ಪುನಃ ಗಂಡನ ಮನೆಗೆ ಕಳುಹಿಸಿ ಕೊಟ್ಟಿರುತ್ತೇವೆ. ಆದಾದ ಬಳಿಕ 1 ರಿಂದ 2 ತಿಂಗಳು ಚನ್ನಾಗಿದ್ದು ನಂತರ ಹೊಡೆ ಬಡೆ ಮಾಡಿ 3- 4 ಬಾರಿ ಮನೆಗೆ ಕಳುಹಿಸಿರುತ್ತಾರೆ. ನಂತರ ನಾವು ಹಿರಿಯರ ಸಮಕ್ಷಮ ನ್ಯಾಯ ಪಂಚಾಯಿತಿ ಮಾಡಿ ಮರಳಿ ಅವರನ್ನು ಗಂಡನ ಮನೆಗೆ ಕಳುಹಿಸಿ ಬಂದಿರುತ್ತೇವೆ. ಅಷೋತ್ತಿಗೆ ಅವರು 2 ನೇ ಮಗುವಿಗೆ 4 ತಿಂಗಳ ಆಗಿರುತ್ತದೆ. ನಂತರ ಅವರನ್ನು ಮನೆಯಿಂದ ಪುನಃ ಹೊಡೆದು ಕಳುಹಿಸಿರುತ್ತಾರೆ ಆದಕಾರಣ ನಾವು ಅವರನ್ನು ಮರಳಿ ಕಳುಹಿಸದೆ ನಮ್ಮ ಮನೆಯಲ್ಲಿಯೇ ಇಟ್ಟುಕೊಂಡಿರುತ್ತೇವೆ. 2 ನೇ ಮಗುವಿನ ಜನನದ ಬಳಿಕ ಮಗುವನ್ನು ನೋಡಲು ಸಹ ಬಂದಿರುವುದಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KATK500058092023/truecopy/order-1.pdf

ತದನಂತರ ಕುಣಿಗಲ್ ನ್ಯಾಯಾಲಯದಿಂದ ಹೆಂಡತಿ ಮತ್ತು ಮಗು ಬೇಕೆಂದು ನೋಟಿಸ್ ಬಂದಿರುತ್ತದೆ. ನಂತರ ನನ್ನ ತಂಗಿ ಮತ್ತು ಅವರ ಮಗಳು ನ್ಯಾಯಾಲಯಕ್ಕೆ ಹಾಜರಾಗಿ ಅವರ ಗಂಡನೊಂದಿಗೆ ಹೋಗಲು ತಯಾರು ಇರುವುದಾಗಿ ಹೇಳಿರುತ್ತಾರೆ. ಅದೇ ದಿನ ಕರೆದುಕೊಂಡು ಹೋಗುತ್ತೇನೆಂದು ಹೇಳಿ ಕರೆದುಕೊಂಡು ಹೋಗದೇ ಬಿಟ್ಟು ಹೋಗಿರುತ್ತಾರೆ ಈ ವಿಷಯವನ್ನು ನಾವು ನ್ಯಾಯಾಲಯದ ಗಮನಕ್ಕೆ ತಂದಿರುತ್ತೇವೆ. ತದನಂತರ 2 - 3 ತಿಂಗಳ ಬಳಿಕ ನಮ್ಮ ಮನೆಯಲ್ಲಿ ನನ್ನ ತಾಯಿ ಮತ್ತು ತಂಗಿ ಮನೆಯಲ್ಲಿದ್ದಾಗ ಆರೋಪಿ 1 ರಿಂದ 4 ಮತ್ತು ಆರೋಪಿ 2 ಅವರ ಸಹೋದರಿಯರು ನಮ್ಮ ಮನೆಗೆ ಬಂದು ನನ್ನ ತಾಯಿ ಮತ್ತು ತಂಗಿಯ ಮೇಲೆ ಹಲ್ಲೆ ಮಾಡಿರುತ್ತಾರೆ ಈ ಬಗ್ಗೆ ನಾವು ದೂರನ್ನು ನೀಡಿರುತ್ತೇವೆ. ಆರೋಪಿ 2 ಸಹ ನಮ್ಮ ಮೇಲೆ ದೂರನ್ನು ನೀಡಿರುತ್ತಾರೆ. ಗಲಾಟೆ ಸಮಯದಲ್ಲಿ ಆರೋಪಿ 2 ನಾನು ನಿನ್ನ ಗಂಡನನ್ನು ಮದುವೆ ಆಗಿರುತ್ತೇನೆ ನೀನು ಇನ್ನೂ ಮುಂದೆ ಮಲ್ಲನಾಯಕನಹಳ್ಳಿಗೆ ಬರುವುದಾಗಲಿ ದೂರು ನೀಡುವುದಾಗಲಿ ಮಾಡಬಾರದೆಂದು ಹೇಳಿರುತ್ತಾರೆ. ನಂತರ ಇದೇ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆಯ ಸಮಯದಲ್ಲಿ ಆರೋಪಿ 2 ಆರೋಪಿ 1 ಅವರನ್ನು ಮದುವೆ ಆಗಿರುವುದಾಗಿ ಹೇಳಿದ್ದು ನಂತರ ನಾವು ಊರಿಗೆ ಹೋಗಿ ವಿಚಾರಿಸಿದಾಗ ಆರೋಪಿ 2 ಅವರಿಗೆ 2 ಮಕ್ಕಳಾಗಿದ್ದು ಅವರು ತಮ್ಮ ಮಕ್ಕಳೊಂದಿಗೆ ಆರೋಪಿ 1 ಅವರ ಮನೆಯಲ್ಲಿ ವಾಸ ಮಾಡುತ್ತಿದ್ದು ಅವರಿಗೆ 15 ರಿಂದ 16 ಜನ ಸೇರಿ ಮದುವೆ ಮಾಡಿರುತ್ತಾರೆ. ಮದುವೆಯನ್ನು ಆರೋಪಿ3 ರಿಂದ 15 ನಿಂತು ಮಾಡಿಸಿರುತ್ತಾರೆ. ನನ್ನ ತಂಗಿಗೆ ಅನ್ಯಾಯ ಮಾಡುವ ಉದ್ದೇಶದಿಂದ ಎಲ್ಲರೂ ಸೇರಿ ಆರೋಪಿ 1 ಅವರಿಗೆ 2 ನೇ ಮದುವೆ ಮಾಡಿಸಿರುತ್ತಾರೆ. ನನ್ನ ತಂಗಿಗೆ ನ್ಯಾಯ ಕೊಡಿಸಬೇಕೆಂದು ಈ ಮೂಲಕ ಕೋರಿಕೊಳ್ಳುತ್ತೇನೆ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.

This is a True Copy of the Court Records Online. Authenticated @ districts.ecourtsindia.com/cnr/KATK500058092023/truecopy/order-1.pdf

www.ecourtsindia.com